ವಾಹನ ತೆರಿಗೆಗಳಿಂದ ಮಂಗಳೂರು ಮಹಾನಗರ ಪಾಲಿಕೆಗೆ ನೀಡಲಾಗುತ್ತಿರುವ ಸಹಾಯಧನ

55 (574) ಶ್ರೀ ವಿಜಯ ಕುಮಾರ್ ಶೆಟ್ಟಿ (ಸುರತ್‌ಕಲ್) : ಮಾನ್ಯ ರಾಜ್ಯ ಹಣಕಾಸು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ಜಿಲ್ಲೆಯಲ್ಲಿ ಸಂಗ್ರಹವಾಗುತ್ತಿರುವ ವಾಹನ ತೆರಿಗೆಗಳಿಂದ ವಿವಿಧ ಪುರಸಭೆಗಳಿಗೆ ಮಂಗಳೂರು ಮಹಾನಗರ ಪಾಲಿಕೆಗೆ ನೀಡಲಾಗುತ್ತಿರುವ ಸಹಾಯಧನ ಎಷ್ಟು?

ಆ) ಈ ಹಣದ ಶಿಷ್ಟ ಬಿಡುಗಡೆಯಾಗಿ ಕೈಗೊಂಡ ಕ್ರಮಗಳೇನು?

ಶ್ರೀ ಎಂ. ಶಿವಣ್ಣ (ಹಣಕಾಸು ರಾಜ್ಯ ಸಚಿವರು) :

ಅ) ರಾಜ್ಯ ಹಣಕಾಸು ಆಯೋಗ ಶಿಫಾರಸ್ಸು ಮಾಡಿದ ಹೊಸ ಸೂತ್ರದಿಂದಾಗಿ ಮಂಗಳೂರು ಜಿಲ್ಲೆಯಲ್ಲಿ ಸಂಗ್ರಹವಾಗುತ್ತಿರುವ ವಾಹನ ತೆರಿಗೆಗೂ ಮತ್ತು ಅದನ್ನು ಮಂಗಳೂರು ಮಹಾನಗರ ಪಾಲಿಕೆಗೆ ಹಂಚಿಕೆ ಮಾಡುವುದಕ್ಕೆ ಯಾವುದೇ ನೇರವಾದ ಸಂಬಂಧ ಇರುವುದಿಲ್ಲ.

ಆ) ಪ್ರಶ್ನೆ 'ಅ' ಗೆ ನೀಡಿದ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಶ್ರೀ ವಿಜಯಕುಮಾರ್ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಏನು ಉತ್ತರವನ್ನು ಕೊಟ್ಟಿದ್ದಾರೆ ಆ ಉತ್ತರ ಖಂಡಿತವಾಗಿಯೂ ಸಮಂಜಸವಾಗಿಲ್ಲ. ಏಕೆಂದರೆ ಪ್ರತಿ ವರ್ಷ ಕಲೆಕ್ಷನ್ ಆದಂತಹ ಹಣದಲ್ಲಿ ನಿರ್ದಿಷ್ಟವಾಗಿ ಇಷ್ಟು ಶೇಕಡಾವಾರು ಹಣವನ್ನು ಮಂಗಳೂರಿಗೆ ಕೊಡುತ್ತೇವೆಂದು ಹೇಳಿ ಮತ್ತು ಎಲ್ಲ ಬಿಲ್ಲ್‌ಗಳಲ್ಲಿ ಸಹ ಈ ಬಗ್ಗೆ ತೀರ್ಮಾನ ಕೈಗೊಂಡಿದ್ದಾರೆ. ಕಳೆದ ಸರ್ಕಾರ ಇರುವಾಗ ಸಹ ನಾನು ಪತ್ರಿಕೆಯಲ್ಲಿ ನೋಡಿದ್ದೇನೆ. ಶ್ರೀಮಾನ್ ಸಿಂಧ್ಯಾರವರು ಇರುವಾಗ ಪರ್ಸ್‌ಂಟೇಜನ್ನು ಕೊಡುತ್ತೇವೆಂದು ಒಪ್ಪಿದ್ದಾರೆ. ಇಲ್ಲಿಂದ ಒಪ್ಪಿ ಅಗ್ರಿಮೆಂಟ್ ಎಲ್ಲಾ ಆಗಿದೆ. ಕಾನೂನು ಆಗಿ ಸರ್ಕಾರದಿಂದ ಮಾತ್ರ ಹಣ ಬಿಡುಗಡೆ ಮಾಡಿಲ್ಲ. ಆದ್ದರಿಂದ 1976ರಲ್ಲಿ ಏನು 16 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದರು, ಇವತ್ತಿಗೂ ಸಹ ಅಷ್ಟೇ ಹಣವನ್ನು ಕೊಡುತ್ತಿದ್ದಾರೆ. ಅಲ್ಲಿ ಖಂಡಿತವಾಗಿಯೂ ರಸ್ತೆಗಳೆಲ್ಲ ಬಹಳಷ್ಟು ಹಾಳಾಗಿದೆ. ಅದನ್ನು ನೀವು ಮಂಗಳೂರು ಕಾರ್ಪೊರೇಷನ್‌ಗೆ ಕಳಿಸಿ ಅಥವಾ ಲೋಕೋಪಯೋಗಿ ಇಲಾಖೆಗೆ ಕಳಿಸಿ ಅಥವಾ ಜಿಲ್ಲಾ ಪಂಚಾಯಿತಿಗೆ ಕಳಿಸಿ; ಯಾರಿಗೆ ಬೇಕಾದರೂ ಹಣ ಕಳುಹಿಸಿ. ಆದರೆ ಆ ಪ್ರಪೋರ್ಷನೇಟ್ ಕೊಡುವಂತಹದು ಏನು ಇದೆ ಅದನ್ನು ಮಂಗಳೂರು, ದಕ್ಷಿಣಕನ್ನಡ ಜಿಲ್ಲೆಗೆ ಕೊಡಬೇಕೆಂದು ನಾನು ವಿನಂತಿಸುತ್ತಿದ್ದೇನೆ.

ಶ್ರೀ ಎಂ. ಶಿವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುತ್ತಿರುವ ವಿಚಾರದ ಬಗ್ಗೆ ಅವರಿಗೆ ಈಗಾಗಲೇ ನಾವು ಉತ್ತರವನ್ನು ಒದಗಿಸಿಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಿ ಹಿಂದೆ ಆಗಿತ್ತು. 1994-95ರಲ್ಲಿ ಒಂದು ಹಣಕಾಸು ಆಯೋಗವನ್ನು ರಚನೆ ಮಾಡಿತ್ತು ಅದರ ಶಿಫಾರಸ್ಸಿನಂತೆ, ಸರ್ಕಾರ ಏನು ಒಂದು ತೀರ್ಮಾನವನ್ನು ಕೈಗೊಂಡಿದೆ. ಎಂದರೆ ಸರ್ಕಾರದ ಹಣದಲ್ಲಿ ಸುಮಾರು 36 ಪರ್ಸೆಂಟ್ ಹಣವನ್ನು ನಿಗದಿಗೊಳಿಸಬಹುದು ಎಂದು ತೀರ್ಮಾನ ಮಾಡಿ, ಈ ಹಣದಲ್ಲಿ ಕೊಡತಕ್ಕಂಥಹ ವ್ಯವಸ್ಥೆ ಇದೆಯೇ ಹೊರತು ಇದನ್ನು ಬೇರೆ ಪ್ರತ್ಯೇಕವಾಗಿ ಕೊಡಲು ಆಗುವುದಿಲ್ಲ.

ಶ್ರೀ ವಿಜಯಕುಮಾರ್ ಶೆಟ್ಟಿ : ಈಗ ಸಿಗುವಂತಹ ಹಣ 16 ಲಕ್ಷಕ್ಕಿಂತ ನಾಲ್ಕು - ಐದು ಪಟ್ಟು ಜಾಸ್ತಿ ಸಿಗಬೇಕಾಗುತ್ತದೆ 36 ಪರ್ಸೆಂಟ್ ಆದರೆ ಸಾಕು, ನಾವು ಸಂತೋಷಪಡುತ್ತೇವೆ. ಆದರೆ ಅಷ್ಟು ಈಗ ಕೊಡುತ್ತಾ ಇಲ್ಲ.

ಶ್ರೀ ಎಂ. ಶಿವಣ್ಣ : ಈಗ ಹೆಚ್ಚಿನ ಹಣವೇ ಸಿಗುತ್ತದೆ. ಈಗ ತಾವೇನು ಪ್ರೊಪೋರ್ಷನೇಟ್ ಆಗಿ ಏನು ಹಣ ಕೊಡಬೇಕು ಎಂದು ಹೇಳುತ್ತಿರೋ, ಅದಕ್ಕಿಂತ ಹೆಚ್ಚಾಗಿ ಈಗ ಸಿಗತಕ್ಕ ವ್ಯವಸ್ಥೆ ಇದೆ. ಏಕೆಂದರೆ ನಗರ ಪಂಚಾಯತಿಗಳಿಗೆ ಸುಮಾರು 15 ಪರ್ಸೆಂಟ್ ಮತ್ತು ಪಂಚಾಯಿತಿಗಳಿಗೆ 85 ಪರ್ಸೆಂಟ್ ಎಂದು ಹೇಳಿ ಹಣಕಾಸು ಆಯೋಗ ಶಿಫಾರಸ್ಸು ಮಾಡಿದಮೇಲೆ, ಬಹುಶಃ 1.5.1997ರಲ್ಲಿ ಸರ್ಕಾರ ಒಂದು ತೀರ್ಮಾನ ಮಾಡಿದೆ. ಹಾಗೆ ತೀರ್ಮಾನ ಮಾಡಿದ ಮೇಲೆ ರಾಜ್ಯ ಸರ್ಕಾರದ ರಾಜಸ್ವ ನಿಧಿಯಿಂದ ಸುಮಾರು 36 ಪರ್ಸೆಂಟ್ ಹಣವನ್ನು ಎತ್ತಿಟ್ಟು ಅದರಲ್ಲಿ ನಗರ ಸಭೆಗಳಿಗೆ 15 ಪರ್ಸೆಂಟ್, ಮತ್ತು ಪಂಚಾಯಿತಿಗಳಿಗೆ ಸುಮಾರು 85 ಪರ್ಸೆಂಟ್ ಎಂದು ನಿಗದಿ ಮಾಡಿದಮೇಲೆ ಇನ್ನೂ ಹೆಚ್ಚಿನ ಹಣ ಈ ನಗರಸಭೆಗಳಿಗೆ ಸಿಗತಕ್ಕಂತಹ ಒಂದು ವ್ಯವಸ್ಥೆ ಇದೆ. ಹಾಗಾಗಿ ಪ್ರತ್ಯೇಕವಾಗಿ ಹಣ ಕೊಡಬೇಕು ಎನ್ನತಕ್ಕ ನೀತಿ ಈಗ ಇಲ್ಲ. ತಾವು ಹೇಳುವುದು ಸಹಜ; ಹಿಂದೆ ಮೋಟಾರ್ ವೆಹಿಕಲ್ ಟ್ಯಾಕ್ಸ್‌ನಲ್ಲಿ ಬಂದಂತಹ ಹಣವನ್ನು ಆಯಾಯ ನಗರಸಭೆಗಳಿಗೆ ಕೊಡುತ್ತಿದ್ದೆವು. ರಾಜ್ಯ ಸರ್ಕಾರದ ಹಣಕಾಸು ಆಯೋಗ ರಚನೆ ಆದಮೇಲೆ ಅದು ಸರ್ಕಾರಕ್ಕೆ ಒಂದು ಶಿಫಾರಸ್ ಮಾಡಿದೆ. ಆ ಶಿಫಾರಸ್ ಮಾಡಿದೆ ಮೇಲೆ 31.03.1997ರಲ್ಲಿ ಒಂದು ತೀರ್ಮಾನ ಮಾಡಲಾಗಿದೆ ಇಷ್ಟು ಪ್ರೊಪೆಲಾರ್ಷನೇಟ್ ಆಗಿ ಹಣ ಕೊಡಬೇಕೆಂದು ತೀರ್ಮಾನ ಮಾಡಿದೆ. ಆದ್ದರಿಂದ ಈಗ ಅಲ್ಲಿ ಪ್ರತ್ಯೇಕವಾಗಿ ಕೊಡುವಂತಹ ಒಂದು ಸಂದರ್ಭ ಉದ್ಭವವಾಗುವುದಿಲ್ಲ ಎನ್ನುವ ವಿಚಾರವನ್ನು ನಾನು ಮಾನ್ಯ ವಿಜಯಕುಮಾರ್ ಅವರ ಗಮನಕ್ಕೆ ತರಲು ಇಷ್ಟಪಡುತ್ತಿದ್ದೇನೆ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೆ, ಇಲ್ಲಿ ಕೊಟ್ಟಿರುವ ಉತ್ತರದ ಪ್ರಕಾರ 30 ಕೋಟಿ ರೂಪಾಯಿಗಳಷ್ಟು ತೆರಿಗೆ ಸಂಗ್ರಹವಾಗುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 30 ಕೋಟಿ ರೂಪಾಯಿಗಳು ಸಂಗ್ರಹವಾಗುತ್ತಿದೆ. ನಮಗೆ ಸಿಗುವಂತಹದ್ದು 25 ಲಕ್ಷ ರೂಪಾಯಿಗಳು ಮಾತ್ರ. ಈ ರೀತಿ ಇದ್ದರೆ ಯಾವ ರೀತಿ ರೋಡ್ ಮೈಂಟೆನೆನ್ಸ್ ಮಾಡಬಹುದು ? ಕನಿಷ್ಟ ಪಕ್ಷ 25 ಪರ್ಸೆಂಟ್ ನಷ್ಟಾದರೂ ಕೊಡುವಂತಹ ಯೋಗ್ಯತೆ ನಮ್ಮ ಸರ್ಕಾರಕ್ಕೆ ಇಲ್ಲದಿದ್ದರೆ ಯಾವ ರೀತಿ ನ್ಯಾಯ ಕೊಟ್ಟಹಾಗೆ ಆಗುತ್ತದೆ? ತಾವು ಹೇಳಿದಿರಿ, ನಮ್ಮ ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸಿನ ಪ್ರಕಾರ ಸಹ ನಮಗೆ ಹಣ ಸಿಗುತ್ತಿಲ್ಲ ಎಂದು ಅಲ್ಲಿಯ ಮಂಗಳೂರು ನಗರಪಾಲಿಕೆಗೆ ಈ ಆಯೋಗದ ಶಿಫಾರಸ್ ಏನು ಇದೆ, ಅದರ ಪ್ರಕಾರ ತಾವು ಹಣ ಬಿಡುಗಡೆ ಮಾಡಿಲ್ಲ. ಈ ಬಗ್ಗೆ ಕೂಡ ತಮ್ಮಿಂದ ಕ್ಲಾರಿಫಿಕೇಶನ್ ಕೇಳುತ್ತಿದ್ದೇನೆ.

ಶ್ರೀ ಎಂ. ಶಿವಣ್ಣ : ಮಾನ್ಯ ಅಧ್ಯಕ್ಷರೇ, ಇದು ಮಂಗಳೂರು ನಗರ ವ್ಯಾಪ್ತಿಗೆ ಒಳಪಡುವುದಿಲ್ಲ, ಇದು ಇಡೀ ರಾಜ್ಯದ ನಗರಸಭೆಗಳಿಗೆ, ಪಟ್ಟಣ ಪಂಚಾಯಿತಿಗೆ ಎಲ್ಲದಕ್ಕೂ ಇದು ಸೇರುವಂತಹದು. ಇದರ ಬಗ್ಗೆ ಪ್ರೊಪೋರ್ಷನೇಟ್ ಆಗಿ ನೋಡಿದಾಗ, ಸಂಗ್ರಹಣೆ ಮಾಡಿದಂತಹ ಸಂಪನ್ಮೂಲಗಳಲ್ಲಿ 36 ಪರ್ಸೆಂಟ್ ಎತ್ತಿಟ್ಟಿದ್ದೇವೆಂದ ಮೇಲೆ ಎಲ್ಲಾ ನಗರಸಭೆಗಳಿಗೂ ಮತ್ತು ಪಂಚಾಯಿತಿಗಳಿಗೂ ಹೋಗತಕ್ಕಂತಹ ವ್ಯವಸ್ಥೆ ಇದೆ; ಹಾಗಾಗಿ ಪ್ರತ್ಯೇಕವಾಗಿ ಅಲ್ಲಿಗೆ ಕೊಡಬೇಕು ಎನ್ನುವ ಪ್ರಶ್ನೆ ಇಲ್ಲ. ಈ ಹಣಕಾಸು ಆಯೋಗ ಶಿಫಾರಸ್ ಮಾಡಿದಮೇಲೆ ಅದನ್ನು ಜಾರಿಗೆ ತಂದಿರತಕ್ಕದ್ದರಲ್ಲಿ ಆ ವ್ಯವಸ್ಥೆ ಇಲ್ಲ. ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ವಿಜಯಕುಮಾರ್ ಶೆಟ್ಟಿ : ಈಗ ಈ ಪ್ರೊಪೋರ್ಷನೇಟ್ ಮಾಡಿರುವುದು ಬಹಳ ಕಡಿಮೆ ಇದೆ. ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಳ್ಳೆಯ ಟ್ಯಾಕ್ಸ್ ಕಲೆಕ್ಷನ್ ಆಗುತ್ತಿದೆ. ಎಲ್ಲ ಒಳ್ಳೆಯದನ್ನು ನಮಗೆ ಹೇಳುತ್ತಾರೆ. ಆದರೆ ನಮಗೆ ಕೊಡಬೇಕಾದ ಪಾಲು ಏನು ಇದೆ, ಆ ಪಾಲನ್ನು ನಮ್ಮ ಕರ್ತವ್ಯದ ಪ್ರಕಾರ ನಮಗೇನು ಸಿಕ್ಕಬೇಕೋ ಅದನ್ನು ಕೊಡುತ್ತಿಲ್ಲ. ಆದ್ದರಿಂದ ಸ್ವಲ್ಪ ಕಡಿಮೆ ಎಂದರೂ ನಮಗೆ ರೋಡ್ ಮೈಂಟಿನೆನ್ಸ್‌ಗೆ, ಇತರೆ ಕೆಲವು ಕಾಮಗಾರಿಗಳಿಗೋಸ್ಕರ ಸಿಗುವಂತಹ ಹಣದ ಹೆಚ್ಚಿನ ಮೊಬಲಗನ್ನು ನಮಗೆ ಕೊಡಬೇಕೆಂದು ನಾನು ಒತ್ತಾಯಿಸುತ್ತಿದ್ದೇನೆ. ಹಣಕಾಸು ಆಯೋಗ ತೀರ್ಮಾನ ಮಾಡಿದ್ದು ಏನು? ಅದು ಯಾವ ರೀತಿಯ ಪ್ರೊಪೋಷನ್ ಎಂಬುದನ್ನು ದಯಮಾಡಿ ಹೇಳಿ. ಪ್ರೊಪೋರ್ಷನೇಟ್ ಎಷ್ಟು ಇದೆ? ಇನ್ ಕಂನಲ್ಲಿ ಎಷ್ಟು ಪ್ರೊಪೋರ್ಷನೇಟ್ ಆಗಿ ಜಿಲ್ಲೆಗೆ ಕೊಡಬೇಕು? ಆ ಪ್ರಕಾರ ನಮಗೆ ಸಿಗುವಂತಹದು ಏನೂ ಸಾಕಾಗುವುದಿಲ್ಲ. ರಸ್ತೆಗಳೆಲ್ಲಾ ಬಹಳಷ್ಟು ಹಾಳಾಗಿದೆ. ಆದ್ದರಿಂದ ದಯವಿಟ್ಟು ಮಾನ್ಯ ಸಚಿವರು ಇದನ್ನು ಹೆಚ್ಚು ಮಾಡಬೇಕು ಮತ್ತು ಪ್ರೊಪೋರ್ಷನೇಟ್ ಯಾವುದೆಂದು ತಿಳಿಸಬೇಕೆಂದು ವಿನಂತಿಸುತ್ತಿದ್ದೇನೆ.

ಶ್ರೀ ಎಂ. ಶಿವಣ್ಣ : ಮಾನ್ಯ ಅಧ್ಯಕ್ಷರೇ, ಈ ವಿಷಯವನ್ನು ಗಮನದಲ್ಲಿಡುತ್ತೇವೆ.

ಸರ್ಕಾರಿ ಕೆಲಸದಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಒಟ್ಟು ಸಂಖ್ಯೆ

57 (564) ಶ್ರೀ ರೇವುನಾಯಕ್ (ಬೆಳವಂಗಿ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಕೆಲಸದಲ್ಲಿ ಇರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನರ ಒಟ್ಟು ಸಂಖ್ಯೆ ಎಷ್ಟು (ಇಲಾಖಾವಾರು : ಹುದ್ದೆವಾರು ಮಾಹಿತಿ ಒದಗಿಸುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು)

ಅ) ಲಭ್ಯವಿರುವ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.